O.S.No.67/2021
PW -1

ದಿನಾಂಕ 27/11/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಪಾಟೀ ಸವಾಲು:- ಶ್ರೀ ಜಿ.ಕೆ. ಪ್ರತಿವಾದಿ ಪರ ವಕೀಲರಿಂದ**

ಈ ದಾವೆಯನ್ನು 14 ಗುಂಟೆಗೆ ವಿಸ್ತೀರ್ಣಕ್ಕೆ ಹಾಕಿರುತ್ತೇನೆ. ಈ ದಾವೆಯನ್ನು 39 ಗುಂಟೆಗೆ ಹೂಡಿರುತ್ತೇವೆ ಎಂದರೆ ಸರಿ. ಸದರಿ 39 ಗುಂಟೆ ಆಸ್ತಿಯಲ್ಲಿ ನಮ್ಮ ತಂದೆಗೆ 19 ಗುಂಟೆ ಮತ್ತು ನನ್ನ ದೊಡ್ಡಪ್ಪನಿಗೆ 19 ಗುಂಟೆ ವಿಭಾಗದಲ್ಲಿ ಬಂದಿರುತ್ತದೆ. ನನ್ನ ದೊಡ್ಡಪ್ಪನಿಗೆ ಮಕ್ಕಳು ಇಲ್ಲದ ಕಾರಣ ಅವರು ತಲಾ 9 ವರೆ ಗುಂಟೆ ಆಸ್ತಿಯನ್ನು ಹಕ್ಕು ಕುಲಾಸೆ ಪತ್ರ ಬರೆದುಕೊಟ್ಟಿರುತ್ತಾರೆ ದಾವಾ ಆಸ್ತಿ ನಮಗೆ ಹೇಗೆ ಬಂದಿರುತ್ತದೆ ಎಂದು ನಮ್ಮ ವಾದ ಪತ್ರದಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಿ.06/03/1986 ರಂದು ಹಕ್ಕು ನಿವೃತ್ತಿ ಪತ್ರದ ಮುಖಾಂತರ ದಾವಾ ಆಸ್ತಿ ಬಂದಿರುತ್ತದೆ ಎಂದು ಬರೆಸಿರುತ್ತೇನೆ. ಸದರಿ ಹಕ್ಕು ನಿವೃತ್ತಿ ಪತ್ರವನ್ನು ನನ್ನ ದೊಡ್ಡಪ್ಪನ ಮಗ ಜಿ.ಎಂ.ತಿಪ್ಪೇಸ್ವಾಮಿ ಇವರು ನಮ್ಮ ತಂದೆ ಚಿಕ್ಕೀರದಾಸಪ್ಪ ರವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ಸರ್ವೆ ನಂಬರ್ ನಲ್ಲಿ ತಿಪ್ಪೆಸ್ವಾಮಿ ಇವರಿಗೆ 9 ವರೆ ಗುಂಟೆ ವಿಸ್ತೀರ್ಣಕ್ಕೆ ಹಕ್ಕು ಇತ್ತು. ಉಳಿದ 19 ವರೆ ಗುಂಟೆ ಹಾಗೂ 9 ವರೆ ಗುಂಟೆ ನಮ್ಮ ತಂದೆಗೆ ಸೇರಿರುತ್ತದೆ.

2. ಸದರಿ 19 ವರೆ ಗುಂಟೆಯಲ್ಲಿ ಅರ್ಧ ನಮ್ಮ ತಂದೆಗೆ ಉಳಿದ ಅರ್ಧ ತಿಪ್ಪೇಸ್ವಾಮಿಗೆ ಕೊಟ್ಟಿದ್ದು ಉಳಿದ 19 ವರೆ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ. ಸದರಿ 19 ವರೆ ಗುಂಟೆ ಜಮೀನನ್ನು ನನ್ನ ತಂದೆ ಖರೀದಿ ಮಾಡಿರುತ್ತಾರೆ. ಖರೀದಿ ಮಾಡಿದ ಕ್ರಯ ಪತ್ರ ನಮ್ಮ ಬಳಿ ಇರುವುದಿಲ್ಲ . 38 ಗುಂಟೆ ಜಮೀನಿನಲ್ಲಿ ನಮ್ಮ ತಂದೆಗೆ ಮತ್ತು ಹೀರಪ್ಪ ರವರಿಗೆ ತಲಾ ಅರ್ಧ ಅರ್ಧ ಬಾಗ ಇದ್ದು ಅದೇ ಸರ್ವೆ ನಂಬರ್ ನಲ್ಲಿ ಉಳಿದ ನನ್ನ ಇಬ್ಬರು ದೊಡ್ಡಪ್ಪದಿಂದರೆ ಆಸ್ತಿ ಇರುತ್ತದೆ. ನಿಪಿ-1 ರ ಪ್ರಕಾರ ನಮಗೆ ಹಕ್ಕು ನಿವೃತ್ತಿ ಬಂದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ನಿಪಿ-1 ರಲ್ಲಿ 38 ಗುಂಟೆ 4 ಜನರಿಗೆ ಬರಬೇಕು ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

3. ನಿಪಿ-1 ರ ಪ್ರಕಾರ ನಮಗೆ 9 ವರೆ ಗುಂಟೆ ಮಾತ್ರ ಬಂದಿರುತ್ತದೆ ಎಂದರೆ ಸರಿ. ನಿಪಿ-1 ರ ಪ್ರಕಾರ ನನಗೆ 9 ವರೆ ಗುಂಟೆ ಮಾತ್ರ ವಾರಸುದಾರರು ಇರುತ್ತೇವೆ ಎಂದರೆ ಸಾಕ್ಷಿ ಖರೀದಿ ಪತ್ರ ಬರೆದುಕೊಟ್ಟಿರುತ್ತಾರೆಂದು ಉತ್ತರಿಸಿರುತ್ತಾರೆ ಸದರಿ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ . ಸಾಕ್ಷಿ ಮುಂದುವರೆದು ಕ್ರಯ ಪತ್ರ ಬರೆದುಕೊಟ್ಟಿರುವುದಿಲ್ಲ ನನ್ನ ತಂದೆ ಮತ್ತು ದೊಡ್ಡಪ್ಪ ಖರೀದಿಸಿರುತ್ತಾರೆಂದು ಉತ್ತರಿಸಿರುತ್ತಾರೆ. ಈ ದಾವೆ ಹೂಡುವ ಕಾಲಕ್ಕೆ ನಮ್ಮ ತಂದೆ 19 ಗುಂಟೆ ಜಮೀನನ್ನು ಖರೀದಿಸಿದ ಬಗ್ಗೆ ನಮೂದು ಮಾಡಿರುವುದಿಲ್ಲ. ದಾವೆ ಹೂಡುವ ಕಾಲಕ್ಕೆ 9 ವರೆ ಗುಂಟೆ ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಿರುವ ಬಗ್ಗೆ ನಾನು ಬರೆಸಿರುವುದಿಲ್ಲ ಎಂದರೆ ಸರಿ. 2 ನೇ ಪ್ರತಿವಾದಿ ದಿ.29/01/1998 ರಂದು ಖರೀದಿ ಮಾಡಿದ ಆಸ್ತಿಯ ಪತ್ರವನ್ನು ನಾನು ನೋಡಿರುವುದಿಲ್ಲ ಸದರಿ ಪತ್ರದ ಮುಖಾಂತರ 2 ನೇ ಪ್ರತಿವಾದಿ 1 ಎಕರೆ 28 ಗುಂಟೆ ಖರೀದಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿ. ನಾನು ದಾವೆ ಹೂಡಿದ ಆಸ್ತಿ ಹಾಗೂ 2 ನೇ ಪ್ರತಿವಾದಿ ಖರೀದಿಸಿದ ಆಸ್ತಿ ಬೇರೆ ಬೇರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಗಮನಕ್ಕೆ ಬಾರದೇ ತಾಲ್ಲೂಕು ಕಛೇರಿಯಲ್ಲಿ ಅರ್ಜಿ ಕೊಟ್ಟಿರುತ್ತಾರೆ ಆ ಕಾರಣದಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ. ತಿಪ್ಪೇಸ್ವಾಮಿ ರವರು ಮಾರಾಟ ಮಾಡಿದ ನಂತರ ಆಸ್ತಿ ತಮ್ಮದು ಎಂದು ಹೇಳಿದ್ದರಿಂದ ಪ್ರತಿವಾದಿ 2 ಮತ್ತು 3 ರವರು ತಹಸೀಲ್ದಾರ್ ರವರ ಮುಂದೆ ಹೇಳಿದ ಕಾರಣ ನಾನು ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ 2 ನೇ ಪ್ರತಿವಾದಿ ಜಮೀನು ಬರುತ್ತದೆ ಎಂದರೆ ಸರಿ. 2 ನೇ ಪ್ರತಿವಾದಿ ಕೊಂಡುಕೊಂಡಿರುವ ಜಮೀನಿಗೆ ನಾನು ತೊಂದರೆ ಮಾಡುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ- ಪ್ರತಿವಾದಿ 1 ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ